ಅಂತುರಗಟ್ಟಮ್ಮ ನೀನು ಮಂತುರಗಾತಿ ಕಾಣೆ ಮಂಟಪದ ಸಾಲ ಗುಡಿಯಾಗೆ
ಮಂಟಪದ ಸಾಲ ಗುಡಿಯಾಗೆ ಕ್ವಾಟೆಳ ಮಾರಿ ಮಂತರಿಸಿ ಹೋಗೆ ತಲೆನೋವ
ಹೋರಿಯ ಹೊಡಕಂಡು ಕೋರುಡುಗಿ ಕರಕಂಡು ಗೋರಿಕಲ್ಲಂತ ಮಲೆಯೋಳ
ಗೋರಿಕಲ್ಲಂತ ಮಲೆಯೋಳ ಕರಕಂಡು ಜೋಡಿ ಹೊಂಟೈತೆ ಪರಿಸೇಗೆ.

ಕಿತ್ತನಕೆರೆ ಲಕ್ಕಮ್ಮನ ಹೊರಗಲ ಗುಡಿಯ ಮುಂದೆ ಆಸಾದಿ ಹನುಮಂತಣ್ಣ ಹಲಗೆ ಹಿಡಿದು ಅಮ್ಮನ ಹೊಗಳಿಕೆ ಹಾಡುಗಳನ್ನು ಸುಮಾರು ಹೊತ್ತಿನಿಂದ ಹಾಡುತ್ತಿದ್ದ. ಯಾಕೋ ಇವತ್ತು ಎಂದಿನ ಲವಲವಿಕೆ ಇರಲಿಲ್ಲ. ಯಾರೋ ಅವನ ನಾಲಗೇನ ಹಿಡಿದಿದ್ದಾರೇನೋ ಅನ್ನುವಂಗಿತ್ತು. ಬಡಿಯುತ್ತಿದ್ದ ಹಲಗೆಯೂ ಆಗಾಗ್ಗೆ ತಾಳ ತಪ್ಪುತ್ತಿತ್ತು. ಹೀಗೇ ಸ್ವಲ್ಪ ಹೊತ್ತು ಪರದಾಡಿದಮ್ಯಾಲೆ ಅದೆಲ್ಲಿ ಅಡಗಿತ್ತೋ ಆ ಆಸಾದಿತನವೇ ನುಗ್ಗಿಬಂದಂಗೆ ಬಂಡುಹಾಡೊಂದು ಹೊರಬಂತು.

ಮಾರಕ್ಕ ಬಾರಕ್ಕ ಮಗಳೀಗೆ ಬುದ್ಧಿ ಹೇಳು ಎಲೆಯ ತೋಟಕೆ ಬರುತಾಳೆ
ಎಲೆಯ ತೋಟಕೆ ಬರುತಾಳೆ ನಿನ ಮಗಳು ಮಲೆಯ ಹಿಚುಕಿದರೆ ಮಿಡಿತಾಳೆ.
ಯಾಕಲೆ ಹುಡುಗಿ ಎಂದಿನಂತಿಲ್ವಲ್ಲೆ ಕುಗ್ಗಿ ಬಂತಲ್ಲೆ ನಿನ ಸಂಸಾರ
ಕುಗ್ಗಿ ಬಂತಲ್ಲೆ ನಿನ ಸಂಸಾರ ಪಿಳೇಗಿನಮ್ಮ ನುಗ್ಗೆ ಹೂವಿನಂತೆ ನಿನ.

